**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಧನಜಂಯ ಸರ್ಜಿ(ಪದವೀಧರರ ಕ್ಷೇತ್ರ) ಇವರು ಮಂಡಿಸಿರುವ ಶೂನ್ಯ ವೇಳೆ ಪ್ರಸ್ತಾಪಕ್ಕೆ ಮಾನ್ಯ ಗೃಹ ಸಚಿವರ ಹೇಳಿಕೆ:**

**ಪ್ರಶ್ನೆ:**

ಡೆಕ್ಕನ್ ಹೆರಾಲ್ಡ್ ಪತ್ರಿಕೆಯ "Fire dept faces summer with just 35% of fleet" ವರದಿಯು ಮುಂದಿನ ಬೇಸಿಗೆಯಲ್ಲಿ ಅಗ್ನಿಶಾಮಕ ಇಲಾಖೆಯು ಕೇವಲ ಶೇ35 ರಷ್ಟು ವಾಹನದೊಂದಿಗೆ ಕಾರ್ಯಚರಿಸಲಿದೆ ಎನ್ನುವ ವಿಷಯವನ್ನು ವರದಿಯಲ್ಲಿ ಪ್ರಕಟಿಸಿದೆ.

ಮುಂಬರುವ ದಿನಗಳಲ್ಲಿ ಬೇಸಿಗೆಯ ಅತಿಯಾದ ಶಾಖದಿಂದಾಗಿ ಕಾಡಿಚ್ಚು, ಬೆಂಕಿ ಅವಘಡಗಳು ಹೆಚ್ಚಾಗುವ ಸಂಭವನೀಯತೆಯಿದ್ದು, ಈ ಸಂಧರ್ಬದಲ್ಲಿ ಅಗ್ನಿಶಾಮಕ & ತುರ್ತು ಸೇವೆಯನ್ನು ಸಮರ್ಪಕವಾಗಿ ನೀಡಬೇಕಾದ ಇಲಾಖೆಯಲ್ಲಿ 15 ವರ್ಷಗಳ ಹಳೆಯದಾದ 443ಕ್ಕೂ ಹೆಚ್ಚೂ ಅಗ್ನಿಶಾಮಕ ವಾಹನಗಳೂ ಪರಿಸರ ಮಾಲಿನ್ಯ ಮತ್ತು ರಸ್ತೆ ಸುರಕ್ಷತಾ ನೀತಿಗನುಣವಾಗಿ ಸ್ಕ್ರ್ಯಾಪ್ ಮಾಡಲಾಗುತ್ತಿರುವುದರಿಂದ, ಕರ್ನಾಟಕ ರಾಜ್ಯ ಕೇವಲ ಶೇ35ರಷ್ಟು ಅಗ್ನಿಶಾಮಕ ವಾಹನಗಳೊಂದಿಗೆ ಈ ಬೇಸಿಗೆಯನ್ನು ಎದುರಿಸುವ ಸ್ಥಿತಿ ಎದುರಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ 216 ಅಗ್ನಿಶಾಮಕ ಠಾಣೆಗಳಿದ್ದು, ಕನಿಷ್ಠ ಒಂದು ಠಾಣೆಗೆ ಒಂದು ಸುಸಜ್ಜಿತ ಅಗ್ನಿಶಾಮಕ ವಾಹನದ ಅವಶ್ಯಕತೆ ಇದೆ.

ಉದಯವಾಣಿ ಪತ್ರಿಕೆಯ ವರದಿಯ ಪ್ರಕಾರ ಕಳೆದ 3 ವರ್ಷಗಳಲ್ಲಿ ತುರ್ತು ಸೇವೆ ಮತ್ತು ಅಗ್ನಿಶಾಮಕ ಇಲಾಖೆಯು 4050 ಕೋಟಿ ಮೌಲ್ಯದ ಆಸ್ತಿ ರಕ್ಷಣೆಯೊಂದಿಗೆ 10000 ಸಾವಿರಕ್ಕೂ ಹೆಚ್ಚು ಜನರ ಜೀವ ರಕ್ಷಣೆ ಮಾಡಿರುವುದು ಅತ್ಯಂತ ಶ್ಲಾಘನೀಯ ವಿಷಯವಾಗಿದೆ.

ಆದರೆ, ಪ್ರಸಕ್ತ ಸನ್ನಿವೇಶದಲ್ಲಿ ಇಲಾಖೆಯ ಬಹುತೇಕ ಪ್ರಮುಖ ಅಗ್ನಿಶಾಮಕ ಕಾರ್ಯದ ತಾಂತ್ರಿಕ ಉಪಕರಣಗಳನ್ನು ಹೊಂದಿರುವ ವಾಹನಗಳಾದ ಅಗ್ನಿಶಾಮಕ ವಾಹನ, ಕ್ಷಿಪ್ರ ಕಾರ್ಯಾಚರಣೆ ವಾಹನಗಳು ಸೇರಿದಂತೆ ಇನ್ನಿತರ ವಾಹನಗಳನ್ನು ವಿಲೇವಾರಿ ಮಾಡುತ್ತಿರುವುದು ಪರಿಸರ ಪ್ರೇಮಿಗಳು ಮತ್ತು ಸಾರ್ವಜನಿಕರನ್ನು ಆತಂಕಕ್ಕೀಡು ಮಾಡಿದೆ.

ಸನ್ಮಾನ್ಯ ಸಭಾಪತಿಯವರೇ,

ಈಗಾಗಲೇ ಹವಾಮಾನ ತಜ್ಞರು ಅತೀ ಶಾಖದ ಕಠಿಣ ಬೇಸಿಗೆಯ ಮುನ್ಸೂಚೆ ನೀಡಿರುವುದರಿಂದ ಮುಂದಿನ ದಿನಗಳಲ್ಲಿ ಕಾಡ್ಗಿಚ್ಚು - ಬೆಂಕಿ ಅವಘಡಗಳಂತಹ ಗಂಭೀರ ಅಪಾಯಕಾರಿ ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು, ತುರ್ತು & ಅಗ್ನಿಶಾಮಕ ಸೇವೆಗಳ ಇಲಾಖೆಯಲ್ಲಿನ ವಾಹನಗಳ ಕೊರತೆಯನ್ನು ತುರ್ತಾಗಿ ಪರಿಹರಿಸಬೇಕಾಗಿದೆ. ಇಲ್ಲವಾದಲ್ಲಿ ರಾಜ್ಯದಲ್ಲಿ ಬೆಂಕಿ ಅವಘಡಗಳಿಂದ ಏನೇ ದುರಂತ ಸಂಭವಿಸಿದರೂ ಇದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಲಿದೆ ಎಂದು ತಿಳಿಸುತ್ತ, ಈ ಗಂಭೀರ ವಿಷಯದ ಕುರಿತು ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ಗೃಹ ಸಚಿವರನ್ನು ಕೋರುತ್ತೇನೆ.

**ಉತ್ತರ:**

ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: GSR 29(E), ದಿನಾಂಕ: 16-01-2023 ಮತ್ತು ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 11019/18/2022-PM-I, ದಿನಾಂಕ: 02-02-2023 ರನ್ವಯ ಇಲಾಖೆಯಲ್ಲಿ 15 ವರ್ಷ ಮೇಲ್ಪಟ್ಟ 482 ವಿವಿಧ ಮಾದರಿಯ ವಾಹನಗಳನ್ನು ಈಗಾಗಲೇ ರಸ್ತೆ ಚಾಲನೆಯಿಂದ ಸ್ಥಗಿತಗೊಳಿಸಲಾಗಿರುತ್ತದೆ.

...2

ಅಗ್ನಿಶಾಮಕ ಇಲಾಖೆಯಲ್ಲಿ ಈ ಕೆಳಕಂಡಂತೆ ವಾಹನಗಳು ಲಭ್ಯವಿದ್ದು, ಅಗ್ನಿ ನಂದಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

| Sl. No. | Vehicles | Below 15 years Vehicals |
|---|---|---|
| 01 | Water Tenders | 151 |
| 02 | Mini Water Tenders | 07 |
| 03 | Advance Water Tenders | 20 |
| 04 | Water Bowzers | 31 |
| 05 | Foam Tenders | 02 |
| 06 | Advance Rescue Vans | 06 |
| 07 | Medium Rescue Vans | 13 |
| 08 | Quick Response Vehicle | 27 |
| 09 | Varuna (Mist Technology on Jeep) | 03 |
| 10 | Agni (Mist Technology on Motor Cycle) | 109 |
| 11 | BA Van | 01 |
| 12 | Rescue Van | 01 |
| 13 | Aerial Ladder Platform | 05 |
| | **Total** | **376** |

ಇದರ ಜೊತೆಗೆ ಅಗ್ನಿಶಾಮಕ ಇಲಾಖೆಯಲ್ಲಿ ಈ ಕೆಳಕಂಡ ವಿವಿಧ ಮಾದರಿಯ ಪೋರ್ಟಬಲ್ ಪಂಪ್ಸ್‌ಗಳು ಲಭ್ಯವಿರುತ್ತವೆ.

| Sl. No. | Types of Pumps | No. of Pumps |
|---|---|---|
| 01 | Portable pumps | 350 |
| 02 | High pressure pumps | 70 |
| 03 | De –watering pumps | 06 |
| 04 | Floating pump | 230 |
| | **Total** | **656** |

ಅಗ್ನಿಶಾಮಕ ಇಲಾಖೆಯಲ್ಲಿ ಮೇಲ್ಕಂಡಂತೆ ಲಭ್ಯವಿರುವ ವಾಹನಗಳು ಮತ್ತು ಅಗ್ನಿನಂದಕ ಉಪಕರಣಗಳ ಸಹಾಯದಿಂದ ಸಮರ್ಪಕವಾಗಿ ಅಗ್ನಿ ನಂದಿಸುವ ಕೆಲಸವನ್ನು ನಿರ್ವಹಿಸಲಾಗುತ್ತಿದೆ.

ಹಾಗೆಯೇ, ಪ್ರಸ್ತುತ 100 ಅಗ್ನಿಶಾಮಕ ವಾಹನಗಳ ಕವಚ ನಿರ್ಮಾಣ ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ. ಅಗ್ನಿಶಾಮಕ ವಾಹನಗಳ ಕವಚ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ. ಕವಚ ನಿರ್ಮಾಣ ಮಾಡಲು ಕನಿಷ್ಠ 06 ತಿಂಗಳ ಕಾಲಾವಕಾಶಬೇಕಾಗಿದ್ದು, ವಾಹನಗಳನ್ನು ಇಲಾಖೆಗೆ ಹಸ್ತಾಂತರ ಪಡೆದ ನಂತರ ಅಗ್ನಿ ನಂದಿಸುವ ಕಾರ್ಯಗಳಿಗೆ ಬಳಸಿಕೊಳ್ಳಲಾಗುವುದು.

**ಸಂಖ್ಯೆ: ಹೆಚ್‌ಡಿ 99 ಎಸ್‌ಎಫ್‌ಬಿ 2025**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**